ಸ್ಥಿರತೆಯನ್ನು ಕಲ್ಪಿಸಲು ಅವರುಗಳು ಅಧಿಕಾರಕ್ಕೆ ಬಂದ 6 ತಿಂಗಳೊಳಗೆ ಅವಿಶ್ವಾಸ ನಿರ್ಣಯ ಮಂಡಿಸದಿರಲು ಮತ್ತು ಅದೇ ಪದಾಧಿಕಾರಿಯು ವಿರುದ್ಧ ಒಂದು ಅವಿಶ್ವಾಸ ನಿರ್ಣನೆ ಮಂಡನೆಯಿಂದ ಇನ್ನೊಂಧು ಅವಿಶ್ವಾಸ ನಿರ್ಣನೆ ಮಂಡನೆಗೆ ಕನಿಷ್ಠ 6 ತಿಂಗಳ ಅವಧಿ ಇರಬೇಕೆಂದು ಅಧಿನಿಯಮದಲ್ಲಿ ಅವಕಾಶ ಕಲ್ಪಿಸತಕ್ಕದ್ದು.

46. ಕ್ಷೇತ್ರ ವಿಂಗಡಣೆ ಕಾರ್ಯವನ್ನು ನಿರ್ಧಿಷ್ಟ ಅವಧಿಯಲ್ಲಿ ಸರ್ಕಾರದಿಂದ ಸ್ವತಂತ್ರವಾಗಿರತಕ್ಕಂತಹ ಕ್ಷೇತ್ರ ವಿಂಗಡಣೆ ಆಯೋಗದ ರೀತಿಯಲ್ಲಿ ಒಬ್ಬ ವ್ಯಕ್ತಿಯಾಗಲಿ ಅಥವಾ ಒಂದು ಸಂಸ್ಥೆಯಾಗಲಿ ಮಾಡತಕ್ಕದ್ದು. ರಾಜ್ಯ ಚುನಾವಣಾ ಆಯೋಗವು ಅಂತಹ ಸಂಸ್ಥೆಯಾಗಿರಬಹುದು.

47. ಪರಿಸರ ಪಾಲನೆ ಕಾರ್ಯಕ್ರಮಗಳಾದ ಸಂರಕ್ಷಣೆ, ಜೀರ್ಣೋದ್ಧಾರ, ದಾಖಲಾತಿ ಮತ್ತು ಬಯೋಡೈವರ್‌ಸಿಟಿ ಸಂಪನ್ಮೂಲಗಳ ಉಪಯೋಗ, ಇಂತಹ ಚಟುವಟಿಕೆಗಳು ಪಂಚಾಯತ್ ರಾಜ್ ಸಂಸ್ಥೆಗಳ ಕಾರ್ಯಕ್ರಮಗಳಲ್ಲಿ ಸೇರಿಸಬೇಕು.

48. ಪಂಚಾಯತ್ ರಾಜ್ ಸಂಸ್ಥೆಗಳ ಮತ್ತು ಲೋಕಸಭೆ ಹಾಗೂ ವಿಧಾನ ಮಂಡಲಗಳ ಕಾರ್ಯ ವ್ಯಾಪ್ತಿಯ ಅತಿಕ್ರಮಣವಾಗಕೂಡದು. ಆದುದರಿಂದ ಲೋಕಸಭಾ ಸದಸ್ಯರನ್ನು ಮತ್ತು ವಿಧಾನ ಮಂಡಲದ ಸದಸ್ಯರುಗಳನ್ನು ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳ ಸದಸ್ಯರುಗಳನ್ನಾಗಿ ಮಾಡಕೂಡದು.

49. ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಸದಸ್ಯರುಗಳು ಕೆಳಮಟ್ಟದ ಪಂಚಾಯತಿಯ ಸದಸ್ಯತ್ವವನ್ನು ಹೊಂದಲು ಅಧಿನಿಯಮದಲ್ಲಿ ಅವಕಾಶವಿಲ್ಲದಿರುವುದು ಸಮಂಜಸವಾಗಿದೆ. ಅದನ್ನು ಬದಲಾಯಿಸುವ ಅವಶ್ಯಕತೆ ಇರುವುದಿಲ್ಲ.

50. ನಾಯಕತ್ವ ಒದಗಿಸುವ ಮತ್ತು ಮನ್ನಣೆ ಪಡೆಯುವ ದೃಷ್ಟಿಯಿಂದ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕರ ಅಧಿಕಾರಿಗಳು ತಾಲ್ಲೂಕು ಮಟ್ಟದ ಇತರೇ ಎಲ್ಲಾ ಅಧಿಕಾರಿಗಳಿಗಿಂತ ಹೆಚ್ಚಿನ ದರ್ಜೆಯ ಅಧಿಕಾರಿಯಾಗಿರತಕ್ಕದ್ದು. ಉಪ ವಿಭಾಗಾಧಿಕಾರಿಯ ಹುದ್ದೆಗಿಂತ ಹೆಚ್ಚಿನ ದರ್ಜೆಯ ಅಧಿಕಾರಿಗಳ ವೃಂದವನ್ನು ಸಂಬಂಧಪಟ್ಟ ಇಲಾಖೆಗಳು ಸೃಷ್ಟಿಸಿ ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಗೆ ಆಯ್ಕೆ ಮಾಡಲು ಅವಕಾಶ ಕಲ್ಪಿಸಿಕೊಳ್ಳಬೇಕು.

ವಿಷಯ:- ಅರೆಕಾಲಿಕ ಉಪನ್ಯಾಸಕರ ಸೇವೆಯ ಖಾಯಂ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 431 (931)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು):- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರೆಕಾಲಿಕ ಉಪನ್ಯಾಸಕರನ್ನು ಖಾಯಂಗೊಳಿಸಲು ಸರ್ಕಾರದವರು

ನಿರ್ಧರಿಸಿದ್ದು ನಿಜವೆ?

ಆ) ಇನ್ನು ಎಷ್ಟು ದಿನಗಳಲ್ಲಿ ಅವರ ಸೇವೆಯನ್ನು ಖಾಯಂಗೊಳಿಸಲಾಗುವುದು?

ಶ್ರೀ ಬಿ.ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು):-

ಅ) 1994-95ನೇ ಸಾಲಿನಲ್ಲಿ ಕರ್ತವ್ಯದಲ್ಲಿದ್ದು ಕನಿಷ್ಠ ಪಕ್ಷ 02 (ಎರಡು) ವರ್ಷಗಳ ಸೇವೆಯನ್ನು ಸಲ್ಲಿಸಿದ ಅರೆಕಾಲಿಕ ಉಪನ್ಯಾಸಕರನ್ನು ಸಕ್ರಮಗೊಳಿಸಲು ಸರ್ಕಾರವು ತಾತ್ವಿಕವಾಗಿ ನಿರ್ಧರಿಸಿದೆ.

ಆ) ಆದಷ್ಟು ತ್ವರಿತವಾಗಿ.

ವಿಷಯ:- ಹರಿಹರ ಪಾಲಿಫೈಬರ್ ಕಂಪನಿಯಿಂದ ಪರಿಸರಾಧಕ್ಕೆ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 432 (133)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು):- ಮಾನ್ಯ ಪರಿಸರ ಮತ್ತು ಜೀವಿಶಾಸ್ತ್ರ ವಿಜ್ಞಾನ ತಂತ್ರಜ್ಞಾನ ಮತ್ತು ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯ ರಾಣೆಬೆನ್ನೂರ್ ತಾಲ್ಲೂಕಿನಲ್ಲಿರುವ ಹರಿಹರ ಪಾಲಿಫೈಬರ್ ಕಂಪನಿಯಿಂದ ಹೊರಬರುವ ಹೊಗೆಯಿಂದ ಅನೇಕ ಗ್ರಾಮಗಳ ನಾಗರೀಕರು, ದನಕರುಗಳು ತೊಂದರೆಗೆ ಒಳಗಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೆ?

ಆ) ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳೇನು?

ಶ್ರೀ ಬಸವರಾಜ ನೀ. ಶಿವಣ್ಣನವರ್ (ಪರಿಸರ ಮತ್ತು ಜೀವಿಶಾಸ್ತ್ರ ವಿಜ್ಞಾನ ತಂತ್ರಜ್ಞಾನ ಮತ್ತು ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು):-

ಅ) ಬಂದಿದೆ.

ಆ) ಹರಿಹರ ಪಾಲಿಫೈಬರ್ಸ್ ಕಾರ್ಖಾನೆಯ ಮಾಲಿನ್ಯವನ್ನು ನಿಯಂತ್ರಿಸಲು ಮಂಡಳಿ ಎಲ್ಲಾ ಕ್ರಮವನ್ನು ಕೈಗೊಂಡಿದೆ. ಆದರೂ ಪೂರ್ಣ ಪ್ರಮಾಣದ ಪರಿಹಾರ ದೊರೆಯದ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬರುತ್ತಿವೆ. ಈ ಬಗ್ಗೆ ಮಂಡಳಿ ಒಂದು ವಿಶೇಷ ಅಧ್ಯಯನವನ್ನು ನಡೆಸುತ್ತಿದೆ. ಈ ಅಧ್ಯಯನ ವರದಿಯನ್ನು ಶೀಘ್ರದಲ್ಲೇ ನಿರೀಕ್ಷಿಸಲಾಗುತ್ತದೆ. ಈ ವರದಿ ಬಂದ ಕೂಡಲೇ ಸರ್ಕಾರವು ಈ ಬಗ್ಗೆ ಕ್ರಮ ಕೈಗೊಳ್ಳುವುದು.

ವಿಷಯ:- ಧಾರವಾಡ ಜಿಲ್ಲೆಗೆ ರಾಷ್ಟ್ರೀಯ ನೀರು ಪೂರೈಕೆ ಯೋಜನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 433 (137)